ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ತರೀಕೆರೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **1284/2023**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುಃ

1) ವೆಂಕಟೇಶ್ ಬಿನ್ ವಿಜಯಕುಮಾರ, 22 ವರ್ಷ,
2) ವೆಂಕಟಭವನ್ ಬಿನ್ ಸದಾಶಿವ, 19 ವರ್ಷ,
3) ಮಹೇಶ ಬಿನ್ ಲೇಟ್ ಗಣೇಶ, 26 ವರ್ಷ,
4) ಸರಿತ ಕೋಂ ಗುರುಪ್ರಸಾದ್, 45 ವರ್ಷ,
5) ಗುರುಪ್ರಸಾದ್ ಬಿನ್ ಲೇಟ್ ಗುರುಮೂರ್ತಿ, 50 ವರ್ಷ,

ಎಲ್ಲರೂ ವಾಸ, ಎ.ವಿ.ಕ್ಯಾಂಪ್, ಲಕ್ಕವಳ್ಳಿ ಗ್ರಾಮ, ತರೀಕೆರೆ ತಾಲ್ಲೂಕು

********

### -ಃ ದೋಷಾರೋಪಣೆಃ-

ಶ್ರೀಮತಿ ಊರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆಃ-

ದಿನಾಂಕ 03.07.2022 ರಂದು ರಾತ್ರಿ ಸುಮಾರು 09.10 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿನಲ್ಲಿ, ಚಾಸಾ-1 ರಮೇಶರವರ ಮನೆಗೆ ಹೊಂದಿಕೊಂಡಂತೆ ಇರುವ ಅಂಗಡಿ ಮುಂಭಾಗದ ರಸ್ತೆಯಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಬಂದು ಚಾಸಾ-1 ರವರಿಗೆ ಸಿಗರೇಟ್ ಕೊಡಲು ಕೇಳಿದ್ದು ಆರೋಪಿಗಳಾದ ನಿಮ್ಮನ್ನು ನೋಡಿದ ಚಾಸಾ-1 ರವರ ನಾಯಿ ಬೊಗಳಿದ್ದು, ಆಗ ಆರೋಪಿತರಾದ ನೀವು ನಾಯಿ ಏಕೆ ಬೊಗಳುತ್ತಿದ್ದ ಅದರ ಜೊತೆಗೆ ಮಾತನಾಡಬೇಕು ಎಂದು ಹೇಳಿದ್ದು, ಅದಕ್ಕೆ ಅಲ್ಲಿಯೇ ಇದ್ದ ಚಾಸಾ-1 ರವರ ಮಗನಾದ ಚಾಸಾ-2 ರವಿಕುಮಾರ್ ನು ಬಂದು ಆರೋಪಿತರಾದ ನಿಮಗೆ ಬುದ್ಧಿ ಮಾತು ಹೇಳಿದ್ದು, ಇದೇ ವಿಚಾರದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಗಲಾಟೆ ಮಾಡಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಅವರ ಅಂಗಡಿ ಮುಂಭಾಗದ ರಸ್ತೆಯಲ್ಲಿ

ಕೆಳಗೆ ಬೀಳಿಸಿ ಸೂಳೆಮಗನೆ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಸದರಿ ಗಲಾಟೆ ಶಬ್ದ ಕೇಳಿ ಚಾಸಾ-3 ರವರು ಜಗಳ ಬಿಡಿಸಲು ಬಂದಾಗ 3 ರಿಂದ 5 ನೇ ಆರೋಪಿತರಾದ ನೀವು ಪುನಃ ಚಾಸಾ-1 ರಿಂದ 3 ರವರಿಗೆ ಅವಾಚ್ಯವಾಗಿ ಬೈದಿದ್ದು ಹಾಗೂ ಜಗಳ ಬಿಡಿಸಲು ಬಂದ ಚಾಸಾ-4 ಶ್ರೀಧರ, ಚಾಸಾ-5 ವೆಂಕಟೇಶ ಮತ್ತು ಚಾಸಾ-6 ದಶರಥ ರವರುಗಳಿಗೂ ಸಹ ಆರೋಪಿಗಳಾದ ನೀವು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಕೈಯಿಂದ ಮತ್ತು ಕಾಲಿನಿಂದ ಒದ್ದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಜಗಳ ಬಿಡಿಸಲು ಬಂದ ಚಾಸಾ-2 ರವರಿಗೆ 2 ನೇ ಆರೋಪಿಯಾದ ನೀವು ಅವರ ಕಾಲಿಗೆ ಕಚ್ಚಿ ಹಾಗೂ 1 ನೇ ಆರೋಪಿಯಾದ ನೀವು ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, 3 ರಿಂದ 5 ನೇ ಆರೋಪಿತರಾದ ನೀವು ಚಾಸಾ-1 ರಿಂದ 3 ರವರಿಗೆ ಕೈಯಿಂದ ಹಲ್ಲೆ ಮಾಡಿದ್ದು ಹಾಗೂ ಜಗಳ ಬಿಡಿಸಲು ಬಂದ ಚಾಸಾ-4 ರಿಂದ 6 ರವರಿಗೆ ಕೈಯಿಂದ ಅವರ ಮೈಕೈಗೆ ಹಲ್ಲೆ ಮಾಡಿ, ಚಾಸಾ-1 ರಿಂದ 6 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-4 ರವರಿಗೆ 1 ನೇ ಆರೋಪಿಯಾದ ನೀವು ರಾಡಿನಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 20.05.2025

ಸಹಿ

**(ಊರ್ಮಿಳ.ವಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.